**ಸಾಕ್ಷಿಯನ್ನು ದಿನಾಂಕಃ 01.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಸಿ.ಬಿ, ವಕೀಲರಿಂದಃ**

ನಾನು 3 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರತಿವಾದಿಗಳು ನನಗೆ ಪರಿಚಯವಿರುತ್ತಾರೆ. ಪ್ರತಿವಾದಿಗಳು ಹಣ ಕೇಳಲು ಬಂದಾಗ ಯಾರು ಇರಲಿಲ್ಲ, ನಾನು ಮತ್ತು ಪ್ರತಿವಾದಿಗಳು ಮಾತ್ರ ಇದ್ದೆವು. ಪ್ರತಿವಾದಿಗಳು ಬರೆದುಕೊಟ್ಟಿರುತ್ತಾರೆಂದು ಹೇಳಿರುವ ಬೇಡಿಕೆ ವಚನಪತ್ರವನ್ನು ಹೊರತುಪಡಿಸಿ ಪ್ರತಿವಾದಿಗಳು ಬೇರೆ ಯಾವುದೇ ಸಾಲದಪತ್ರ ಅಥವಾ ಇನ್ನಿತರೆ ಯಾವುದೇ ಪತ್ರವನ್ನು ಬರೆದುಕೊಟ್ಟಿಲ್ಲ. ಪ್ರತಿವಾದಿಗಳು ನಿಪಿ-1 ಕ್ಕೆ ಸಹಿ ಮಾಡುವಾಗ ಸಿದ್ದು ಮತ್ತು ಹೊಂಬಯ್ಯ ಎಂಬುವವರು ಇದ್ದರು. ಸದರಿ ಸಾಕ್ಷಿದಾರರನ್ನು ವಿಚಾರಣೆ ಮಾಡಲು ಯಾವುದೇ ತೊಂದರೆ ಇರುವುದಿಲ್ಲ. ದಿನಾಂಕ 17.10.2017 ರಂದು ನನ್ನ ಬಳಿ ರೂ.1,50,000/- ಹಣ ಇತ್ತು ಎಂದು ತೋರಿಸಲು ನನ್ನ ಬ್ಯಾಂಕ್ ಸ್ಟೇಟ್ ಮೆಂಟನ್ನು ಹಾಜರುಪಡಿಸಿಲ್ಲ. ನಾನು ಪ್ರತಿವಾದಿಗಳಿಗೆ ಹಣ ಕೊಟ್ಟಿರುತ್ತೇನೆ ಎಂಬ ಬಗ್ಗೆ ನಿಪಿ-1 ನ್ನು ಹೊರತುಪಡಿಸಿ ಸ್ವೀಕೃತಿ ಪಡೆದಿಲ್ಲ. 2017 ರಲ್ಲಿ ನಾನು ಪ್ರತಿವಾದಿಗಳಿಗೆ ಹಣ ಕೊಟ್ಟ ನಂತರ ನಾನು ಪದೇ ಪದೇ ಪ್ರತಿವಾದಿಗಳ ಮನೆಗೆ ಹೋಗಿ ಕೇಳಿರುತ್ತೇನೆ , ಆದರೆ ಪ್ರತಿವಾದಿಗಳು ಕೊಡುತ್ತೇವೆ ಎಂದು ಹೇಳಿ ಕಳುಹಿಸಿರುತ್ತಾರೆ. ನಾನು ಪ್ರತಿವಾದಿಗಳಿಗೆ ನೋಟಿಸ್ ನೀಡಿರುವುದಿಲ್ಲ. ಛಾಪಾ ಕಾಗದವನ್ನು 2 ನೇ ಪ್ರತಿವಾದಿ ತಾಲ್ಲೂಕು ಕಛೇರಿ ಬಳಿ ತಂದಿರುತ್ತಾರೆ. ನಿಪಿ-1 ನ್ನು ಹಳ್ಳಿದಿಡ್ಡಿ ಶಿವಣ್ಣರವರು ನಂಜನಗೂಡಿನ ಉಪ ನೋಂದಣಾಧಿಕಾರಿಗಳ ಕಛೇರಿ ಇರುವ ಪಕ್ಕದ ಮಳಿಗೆಯಲ್ಲಿ ಬರೆದಿರುತ್ತಾರೆ. ನಿಪಿ-1 ರಲ್ಲಿರುವ ಒಕ್ಕಣೆಗಳನ್ನು ನಾನೇ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ನ್ನು ತಯಾರಿಸುವಾಗ ಪ್ರತಿವಾದಿಗಳು ಇರಲಿಲ್ಲ ಎಂದರೆ ಸರಿಯಲ್ಲ. ಖಾಲಿ ಛಾಪಾ ಕಾಗದವನ್ನು

ನಾನೇ ಪಡೆದು ನನಗೆ ಬೇಕಾದ ರೀತಿಯಲ್ಲಿ ಹಣವನ್ನು ನಮೂದಿಸಿ ಅದರ ಒಕ್ಕಣೆಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಿಪಿ-1 ನ್ನು ಓದಿಸಿ ತಿಳಿದುಕೊಂಡು ಸಹಿ ಮಾಡಿರುತ್ತಾರೆಂದು ಪರಿಗಣಿಸಲು ನನ್ನನ್ನು ಹೊರತುಪಡಿಸಿ ಬೇರೆ ಯಾರು ಇರುವುದಿಲ್ಲ. ನನ್ನ ಬಳಿ ರೂ.1,50,000/- ಹಣ ಇತ್ತು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ದಾಖಲೆಗಳು ಇರುವುದಿಲ್ಲ, ಆದರೆ ನಗದನ್ನು ಇಟ್ಟುಕೊಂಡಿದ್ದೆ. ರೂ.20,000/- ಕ್ಕಿಂತ ಹೆಚ್ಚು ಹಣವನ್ನು ಕೊಡಬೇಕಾದರೆ ಚೆಕ್ ಅಥವಾ ಡಿ.ಡಿ ಅಥವಾ ಅಂತರ್ಜಾಲ ಬ್ಯಾಂಕ್ ವ್ಯವಹರಣೆ ಮೂಲಕ ಮಾಡಬೇಕೆಂದು ನಿಯಮ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಬೇರೆಯವರಿಗೆ ಸಾಲ ಕೊಡಲು ಯಾವುದೇ ಪರವಾನಗಿ ಪಡೆದಿಲ್ಲ. ನನ್ನ ಬಳಿ 1 ಎಕರೆ ಜಮೀನು ಇರುತ್ತದೆ. ನನಗೆ ಇಬ್ಬರು ಹೆಣ್ಣು ಮಕ್ಕಳಿದ್ದು, ಮದುವೆಯಾಗಿರುತ್ತಾರೆ. ನನಗೆ ಇರುವ 1 ಎಕರೆ ಗದ್ದೆಯಲ್ಲಿ ಕಷ್ಟ ಪಟ್ಟು ಕೆಲಸ ಮಾಡಿದರೆ ವಾರ್ಷಿಕವಾಗಿ ರೂ. 40,000/- ಆದಾಯ ಬರುವ ಭತ್ತ ಬೆಳೆಯುತ್ತೇವೆ. ಸದರಿ ಆದಾಯದಲ್ಲಿ ಎಲ್ಲಾ ಖರ್ಚು ಕಳೆದು ರೂ. 15,000/- ರಿಂದ 20,000/- ಉಳಿಯುತ್ತದೆ. ಪ್ರತಿವಾದಿಗಳು ಲಿಖಿತ ಹೇಳಿಕೆಯಲ್ಲಿ ಏನು ಹೇಳಿರುತ್ತಾರೆಂದು ನಾನು ತಿಳಿದುಕೊಂಡಿರುವುದಿಲ್ಲ. 2016ರಲ್ಲಿ ಪ್ರತಿವಾದಿಗಳು ನನ್ನ ಬಳಿ ರೂ.20,000/- ಹಣ ಪಡೆದು ಸದರಿ ಹಣವನ್ನು ಸಂಪೂರ್ಣವಾಗಿ ಪಾವತಿ ಮಾಡಿದ್ದರೂ ಕೂಡ ಬಡ್ಡಿಗಾಗಿ ನಿಪಿ-1 ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ, ಆದರೆ ನಾನು ಜಮೀನನ್ನು ಮಾರಿ ಬಂದ ಹಣದಿಂದ ಪ್ರತಿವಾದಿಗಳಿಗೆ ಹಣ ಕೊಟ್ಟಿರುತ್ತೇನೆ. ನಿಪಿ-1 ನ್ನು ಬಡ್ಡಿಗೋಸ್ಕರ ಸೃಷ್ಟಿ ಮಾಡಿರುವ ಬಗ್ಗೆ ಕೆಂಪಿಸಿದ್ದನಹುಂಡಿಯಲ್ಲಿ ಸಾಕ್ಷಿದಾರರಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ರೂ.1,50,000/- ಹಣ ಪಡೆದಿರುತ್ತೇವೆಂದು ಯಾವುದೇ ಬೇಡಿಕೆವಚನ ಪತ್ರವನ್ನಾಗಲಿ

ಅಥವಾ ಹಣ ಸಂದ ರಶೀದಿಯನ್ನಾಗಲಿ ಬರೆದುಕೊಟ್ಟಿಲ್ಲ ಮತ್ತು ಸದರಿ ಹಣಕ್ಕೆ ಬಡ್ಡಿ ಕೊಡುವುದಾಗಿ ಒಪ್ಪಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಕೆಂಪಿಸಿದ್ದನಹುಂಡಿ ಗ್ರಾಮದಲ್ಲಿ ಜಮೀನು ಇರುತ್ತದೆ ಎಂದರೆ ಅವರಿಗೆ ಗದ್ದೆ, ಜಮೀನು, ತೋಟ ಇರುತ್ತದೆ. 2 ನೇ ಪ್ರತಿವಾದಿ ಕಾರ್ಖಾನೆಗೆ ಕೆಲಸಕ್ಕೆ ಹೋಗುತ್ತಾರೆ ಎಂದರೆ ಪ್ರತಿವಾದಿಗಳಿಬ್ಬರು ಹೋಗುತ್ತಾರೆ. ಪ್ರತಿವಾದಿಗಳಿಬ್ಬರು ಕಾರ್ಖಾನೆಯಲ್ಲಿ ಪ್ರತಿ ತಿಂಗಳು ತಲಾ ರೂ.40,000/- ಪಡೆಯುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿಗಳು ಆರ್ಥಿಕವಾಗಿ ಚೆನ್ನಾಗಿರುವುದರಿಂದ ಬಡ್ಡಿಯನ್ನು ಸೇರಿಸಿ ಕೊಡುತ್ತೇವೆಂದು ನನ್ನ ಬಳಿ ಯಾವುದೇ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ನಮಗೆ ಇರುವ ಆದಾಯದಲ್ಲಿ ನಮ್ಮ ಕುಟುಂಬವನ್ನು ನಡೆಸಲು ಸಾಕಾಗುವುದಿಲ್ಲವಾದ್ದರಿಂದ ಪ್ರತಿವಾದಿಗಳಿಗೆ ಬಡ್ಡಿಗಾಗಿ ಸಾಲ ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಸಹಿ ಹಾಕಿರುತ್ತಾರೆ ಎಂದು ಹೇಳಿರುವ ಸಾಕ್ಷಿದಾರರು ಹಾಗು ಪತ್ರಬರಹಗಾರರು ನನಗೆ ಗೊತ್ತಿರುವುದರಿಂದ ಅವರ ಜೊತೆ ಶಾಮೀಲಾಗಿ ನಿಪಿ-1 ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ನ್ನು ತಯಾರಿಸಿರುತ್ತಾರೆ ಎಂದು ಹೇಳಿದ ಸಮಯದಲ್ಲಿ ಪ್ರತಿವಾದಿಗಳು ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಂದ ಅಕ್ರಮವಾಗಿ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆ ಹಣ ಕೊಡಬೇಕಾಗಿದ್ದರೆ ನಾನು ನೋಟಿಸ್ ನೀಡುತ್ತಿದ್ದೆ ಮತ್ತು ಸದರಿ ನೋಟಿಸ್ ಗೆ ಸೂಕ್ತವಾದ ಪ್ರತ್ಯುತ್ತರ ನೀಡುತ್ತಿದ್ದರು, ಆದ್ದರಿಂದ ಉದ್ದೇಶಪೂರ್ವಕವಾಗಿ ಪ್ರತಿವಾದಿಗಳಿಗೆ ನೋಟಿಸ್ ನೀಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ದಾವೆ ಸಲ್ಲಿಸಲು ಕಾಲಮಿತಿ ಮುಗಿಯುತ್ತದೆ ಎಂಬ ಉದ್ದೇಶದಿಂದ ತಾನು

ನೋಟಿಸ್ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಕೇಳಿರುವ ಯಾವುದೇ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ** ದಿವಾನಿ **ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**

**ನಂಜನಗೂಡು.**